**ಓ ಎಸ್ ನಂ. 99/2023 ಪಿಡಬ್ಲ್ಯೂ2**

**ಸಾಕ್ಷಿಯನ್ನು ದಿಃ 24.10.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಎ.ಜಿ.ಪಿ ವಕೀಲರಿಂದಃ**

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ಮತ್ತು ವಾದಿಯು ಒಂದೇ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವುದರಿಂದ ಪರಸ್ಪರ ಪರಿಚಯವಿದ್ದೇವೆ. ಸರ್ವೆ ನಂ. 79 ಕ್ಕೆ ಸಂಬಂಧಿಸಿದಂತೆ ವಾದಿಯು ಈ ದಾವೆ ಹೂಡಿದ್ದಾರೆ. ಆ ಜಮೀನಿನ ಆರ್ ಟಿ ಸಿ ಸ್ವಾಮೀಗೌಡರ ಹೆಸರಿನಲ್ಲಿದೆ. ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ನಾನು ಈಗ ನೋಡಿದ್ದೇನೆ. ಈಗ ಆರ್ ಟಿ ಸಿ ಯು ಅರಣ್ಯ ಇಲಾಖೆಯ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಅರಣ್ಯ ಇಲಾಖೆಯವರೇ ಗಿಡ ಮರ ಬೆಳೆಸಿ ಆ ಜಮೀನಿನ ಸ್ವಾಧೀನಾನುಭವದಲ್ಲಿದ್ದರೂ ಸಹ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಜಮೀನಿನ ವಿಸ್ತೀರ್ಣ 4 ಎಕರೆ ಇದೆ. ಆ ಜಮೀನಿನಲ್ಲಿ ವಾದಿಯು ವ್ಯವಸಾಯ ಮಾಡುತ್ತಿರುವ ಬಗ್ಗೆ ಆರ್ ಟಿ ಸಿ ನೋಡಿದ್ದೇನೆ. ಈ ವರ್ಷ ವಾದಿಯು ಆ ಜಮೀನಿನಲ್ಲಿ ಹುರುಳಿ ಬೆಳೆದಿದ್ದಾರೆ. ವಾದಿಯು ಆ ಜಮೀನಿನಲ್ಲಿ ಯಾವುದೇ ಹುರುಳಿ ಬೆಳೆಯದೆ ಅರಣ್ಯ ಇಲಾಖೆಯವರೇ ಗಿಡ ಮರ ಬೆಳೆಸಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆ ಜಮೀನಿನ ಪಕ್ಕದಲ್ಲಿ ನಮ್ಮ ಮನೆ ಮತ್ತು ಜಮೀನು ಇದೆ. ನಮ್ಮ ಜಮೀನಿನ ಸರ್ವೆ ನಂಬರು 63 ಆಗಿದೆ. ನಮ್ಮ ಜಮೀನಿಗೂ ದಾವಾ ಜಮೀನಿಗೂ 20 ಮೀಟರ್ ಅಂತರವಿದೆ. ನಮ್ಮ ಜಮೀನಿನ ಚಕ್ಕುಬಂದಿ ಪೂರ್ವಕ್ಕೆಃ ಹಿರಿಯಮ್ಮನ ಕೊಡುಗೆ ಜಮೀನು, ಪಶ್ಚಿಮಕ್ಕೆಃ ಮಂಚಯ್ಯರವರ ಜಮೀನು, ಉತ್ತರಕ್ಕೆಃ ಮಂಚಯ್ಯರವರ ಜಮೀನು, ದಕ್ಷಿಣಕ್ಕೆಃ ಮಾರಮ್ಮನ ಕೊಡುಗೆ ಜಮೀನು. ನಮ್ಮ ಜಮೀನಿನ ವಿಸ್ತೀರ್ಣ 1 ಎಕರೆ ಇದೆ. ಅದು ನಮ್ಮ ಪೂರ್ವಜರ ಆಸ್ತಿ.

ದಾವಾ ಆಸ್ತಿಯ ಪೂರ್ವಕ್ಕೆ: ನಿಂಗಮ್ಮನ ಜಮೀನು, ಪಶ್ಚಿಮಕ್ಕೆ: ಮಹಾದೇವಮ್ಮರವರ ಜಮೀನು, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸರ್ಕಾರಿ ಜಮೀನು. ದಕ್ಷಿಣಕ್ಕೆ ಇರುವ ಸರ್ಕಾರಿ ಜಮೀನು ಪಾಳು ಬಿದ್ದಿದೆ. ನಾನು ಹೇಳಿದ ಚಕ್ಕುಬಂದಿಯಲ್ಲಿ ವಾದಿ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**